# ವ್ಯಾಖ್ಯಾನ - Explanation

## <u>ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ ವಿಠ್ಠಲ</u>

**Ref.**: Dasara Maatina Sobagu, by Dr. Vijayendra R Desai, page No. 66.

ರಾಮ ನಾಮ ಪಾಯಸಕ್ಕೆ ಕೃಷ್ಣ ನಾಮ ಸಕ್ಕರೆ
ವಿಠಲ ನಾಮ ತುಪ್ಪವ ಕಲಸಿ ಬಾಯಿ ಚಪ್ಪರಿಸಿರೋ || p ||

ಒಮ್ಮಾನ ಗೋಧಿಯ ತಂದು ವೈರಾಗ್ಯ ಕಲ್ಲಲಿ ಬೀಸಿ
ಸುಮ್ಮಾನ ಸಜ್ಜಿಗೆಯ ತೆಗೆದು ಸಣ್ಣ ಶಾವಿಗೆಯ ಹೊಸೆದು || 1 ||

ಹೃದಯವೆಂಬೊ ಮಡಕೆಯಲ್ಲಿ ಭಾವವೆಂಬೊ ಎಸರನಿಟ್ಟು
ಬುದ್ಧಿಯಿಂದ ಪಾಕ ಮಾಡಿ ಹರಿವಾಣಕೆ ಬಡಿಸಿಕೊಂಡು || 2 ||

ಆನಂದ ಆನಂದವೆಂಬೊ ಎರಡು ತೇಗು ಬಂದಾಗ
ಆನಂದ ಮೂರುತಿ ನಮ್ಮ ಪುರಂದರ ವಿಠಲನ ನೆನೆಯಿರೊ || 3 ||

**ರಾಮ ನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ**
**ವಿಠ್ಠಲ ನಾಮ ತುಪ್ಪವ ಬೆರೆಸಿ ಬಾಯಿ ಚಪ್ಪರಿಸಿರೋ**

ಎಲ್ಲಿಯವರೆಗೆ?
ಆನಂದ ಆನಂದವೆಂಬೋ ತೇಗು ಬರುವವರೆಗೆ.
ಪಾಯಸ ಸಮರಸವಾಗಿದೆ. ಸುಮಧುರವಾಗಿದೆ. ದಟ್ಟವಾಗಿದೆ. ಮತ್ತೆ ಮತ್ತೆ ಚಪ್ಪರಿಸ ಬೇಕೆನಿಸುವದು.
ಇದುವೇ ಭಕ್ತಿ ಭರಿತ ಜ್ಞಾನ ಸಹಿತ ಸರ್ವ ಶರಣಾಗತಿ ಪರಮಾತ್ಮನಲ್ಲಿ.
ಪರಮಾತ್ಮನೇ ಪರಮಾನ್ನ. ಪರಮಾನ್ನವೇ ಪಾಯಸ. ಪಾಯಸವೇ ಪರಮ ಅನ್ನ. ಪರಮಾತ್ಮನೇ ಅನ್ನ ಶಬ್ದ ವಾಚ್ಯ. ಅನ್ಯರು ಅನ್ನವಲ್ಲ. ಯಾಕ?
ಎಲ್ಲರಿಗೂ ಅನ್ನದ - ಅನ್ನಂ ದದಾತಿ ಅದಕ್ಕಾಗಿ ಆತ ಅನ್ನ.
ಅಷ್ಟೇ ಅಲ್ಲ.
ಪ್ರಳಯ ಕಾಲದಲ್ಲಿ ಇಡೀ ಚರಾಚರ ಬ್ರಹ್ಮಾಂಡವನ್ನೇ ಉಂಡು ಉದರದಲ್ಲಿ ಧರಿಸುತ್ತಾನೆ.
ಬ್ರಹ್ಮಾಂಡ ಅವನ ಅನ್ನ. ಅದಕ್ಕಾಗಿ ಆತ ಅನ್ನ - ಪರಮಾನ್ನ - ಪಾಯಸ.

ಈ ಪಾಯಸ ಎದರಿಂದ ಮಾಡಿದಿರಿ? ಯಾಕಿಷ್ಟು ರುಚಿ?
ಕೇಳಿ. –

**ಒಮ್ಮನ ಗೋದಿಯ ತಂದು ವೈರಾಗ್ಯ ಕಲ್ಲಲಿ ಬೀಸಿ**

ಜೀವವೇ ಬೀಜ - ಗೋದಿ.  ಒಳ್ಳೇ ಜೀವವೇ ಒಮ್ಮನ ಗೋದಿ.  ಘಮ್ಮನ ಪಾಯಸದ ಗೋದಿ.  ಈ ಜೀವ ಗೋದಿ ಸಂಸಾರವೆಂಬುವ ಚಕ್ರ - ಬೀಸು ಕಲ್ಲು.
ಸುಖ ದುಃಖವೆಂಬ ಬೀಸುವ ಸುತ್ತುಗಳು.
ಹುಟ್ಟು ಸಾವುಗಳ ಚಕ್ರ.  ಸಾಕಾಯಿತು.  ಸಾರವಿಲ್ಲ ಸಂಸಾರದಲ್ಲಿ ಅನಿಸಿತು.
ಸಂಸಾರ ಸಸಾರವಲ್ಲ ಅನಿಸಿತು.
ಉತ್ಪನ್ನವೇ ವೈರಾಗ್ಯ. = ಅದೇ ಸಂಸಾರದಲ್ಲಿ ವಿರತಿ.
ಸಾರ, ವರಸಾರ, ವರರಸ, ಯಾರು? ಸಂಸಾರದಿಂದ ಪಾರು ಮಾಡುವ ತಾರ ಯಾರು? ತಾರ ಪಾದ್ಯ ಭಗವಂತ.  ಎನಿಸಿತು.
ಪರಮಾತ್ಮನಲ್ಲಿ ರತಿ.  ಇದು ಭಕ್ತಿ.
ಇನ್ನು

**ಸುಮ್ಮನ ಸಜ್ಜಿಗೆ ತೆಗೆದು**

ಗೋದಿಯ ಆರಿಸಿ ಶುದ್ದೀಕರಿಸಿ ಸಜ್ಜಿಗೆ ಮಾಡುವದು –
ಅಹಂಕಾರ ಮಮಕಾರ ತೆಗೆದು ಸಣ್ಣ ಸಜ್ಜಿಗೆ ಅಂದರೆ ಮದ, ಮತ್ಸರಾದಿ ಅರಿಷಡ್ ವೈರಿಗಳ ಕುಟ್ಟಿ, ವಿನಮ್ರತೆ.
ನೀನು ಈಶ ನಾನು ದಾಸ ಎಂಬ ಸಜ್ಜಿಗೆ - ಜೀವನ ಸಾತ್ವಿಕ ಗುಣಕ್ಕೆ ಉಪಚಯ.

**ಸಣ್ಣ ಶಾವಿಗೆ ಹೊಸೆದು**

ಪಯ ಎಂದರೆ ಹಾಲು.  ಹಾಲಿನಿಂದ ಮಾಡಿದ್ದು ಪಾಯಸ.
ಹಾಲು ಶುದ್ದ ಸಾತ್ವಿಕತೆ, ಜ್ಞಾನದ ಪ್ರತೀಕ.
ಸಜ್ಜಿಗೆಯಲ್ಲಿ ಅಂತಃಕರಣವೆಂಬೋ ಹಾಲು ಬೆರೆಸಿ.  ನಮಸ್ಕರಿಸುತ್ತ ಕಲಿಸಿ.
ದೇಹ ದಂಡನೆಯಿಂದ ನಾದಿ.  ಜ್ಞಾನದಿಂದ ತಿಕ್ಕಿ.  ಪ್ರೀತಿಯಿಂದ ನೆನೆಸಿ.
ಭಕ್ತಿಯಿಂದ ಹೊಸೆಯಿರಿ.
ಆಗ ಪರಮಾನ್ನಕ್ಕೆ ಪಕ್ವ ಶಾವಿಗೆ ಸಿದ್ದ.

**ಹೃದಯವೆಂಬೋ ಮಡಿಕೆಯಲ್ಲಿ**

ದೇಹವೇ ಮಡಿಕೆ.  ಹೃದಯವೇ ಅವಕಾಶ.
ಅಲ್ಲಿಯೇ ಪರಮಾತ್ಮ,ಜೀವಾತ್ಮ ವಾಸ.  ಮುಖ್ಯ ಪ್ರಾಣರೇ ಅಧಿಷ್ಠಾನ.
ಇವೆಲ್ಲ ಅಷ್ಟದಳ ಕಮಲದಲ್ಲಿ.   ಇದು ಅಡಿಗೆ ಮನೆ.
ಪರಮಾತ್ಮವೆಂಬೋ ಪರಮಾನ್ನವೇ ಅಡಿಗೆ.
ತಯಾರಿಸುವ ಬಗೆ ಹೇಗೆ? --

**ಭಾವವೆಂಬೊ ಎಸರನ್ನಿಟ್ಟು**

ಭಾವ, ನೀರು, ಶಾಖ ಈ ಮೂರು ಬೇಕು.  ಪಾಕ ಮಾಡಲು.
ಏನು ಭಾವ? =
ಭಾವ ಅಂದರೆ ಇರುವಿಕೆ.  ಅಸ್ತಿತ್ವ.  ಆಸ್ತಿಕ್ಯ.   ಪರಮಾತ್ಮ ಇದ್ದಾನೆ.  ನಮ್ಮನ್ನು ಅನವರತ ರಕ್ಷಿಸುತ್ತಾನೆ ಎಂಬ ಧೃಡ ವಿಶ್ವಾಸ.
ಶ್ರದ್ಧೆ.  ನಿಷ್ಠೆ.  ಆತ ಪರಮ ಎಂಬ ಜ್ಞಾನ.  ಇದು ಭಾವ.  ಈ ಭಾವ ಬರುವ ಬಗೆ ಹೇಗೆ?
ನೀರು ತೆಗೆದುಕೊಳ್ಳಿ.  ನೀರು ಎಂದರೆ ತೀರ್ಥ.
ತೀರ್ಥ ಎಂದರೆ ಶಾಸ್ತ್ರ ಜ್ಞಾನ.
ಚಿನ್ನಕ್ಕೆ ಪುಟವಿಟ್ಟಾಗ ಚೊಕ್ಕ ಬಂಗಾರ.
ಅದಕ್ಕೆ ಶಾಖ ಕೊಡಿ.  ಕಾಯಿಸಿ.  ಎಸರು ಬರುವದು.  ಜ್ಞಾನ ಭಕ್ತಿ ಉಕ್ಕುವದು.  ಪಕ್ವವಾಗುವದು.

**ಬುದ್ಧಿಯಿಂದ ಪಾಕ ಮಾಡಿ**

ಮನಸ್ಸು ಚಂಚಲಾತ್ಮಕ.  ಚಾಂಚಲ್ಯ ಬೇಡ.  ಬುದ್ಧಿ ನಿಶ್ಚಯಾತ್ಮಕ.  ಅದಕ್ಕಾಗಿ ಬುದ್ಧಿಯಿಂದ ಪಾಕಮಾಡಿ.  ಜ್ಞಾನ ಕುದಿಸಿ.

**ಕೃಷ್ಣ ನಾಮವೆಂಬ ಸಿಹಿ ಸಕ್ಕರೆ ಬೆರೆಸಿ.**

ಕೃಷ್ಣ ಮಹಾತ್ಮೆ ಜ್ಞಾನವೇ ಸಿಹಿ ಸಿಹಿ.  ಅನುಭವ, ಅನುಸಂಧಾನವೆಂಬ ಸಣ್ಣ ಸೌಟಿನಿಂದ ಕಲಿಸಿ.

ಶಮ, ದಮ, ನಿಷ್ಠೆ, ನಿಗ್ರಹ, ಜಪ, ತಪ, ತಾಳ್ಮೆ ಮೊದಲಾದ
ಯಾಲಕ್ಕಿ, ಲವಂಗ, ಗೋಡಂಬಿ, ದ್ರಾಕ್ಷಿ, ಕೇಶರ ಸೇರಿಸಿ.  ಕಲಿಸಿ ಕಲಕಿ.  ಪಾಯಸ ಸುರಸ, ಸಮರಸವಾಗುವದು.

ಪರತತ್ವ ಪರಮಾತ್ಮ ಎಂದು ನಿಶ್ಚಯಿಸಿ.
ಇದಕ್ಕೆ

**ವಿಠ್ಠಲ ನಾಮ ತುಪ್ಪವ ಬೆರೆಸಿ**

ತುಪ್ಪ ಸ್ನಿಗ್ಧ. ದಟ್ಟ. ಗಟ್ಟಿ. ನಿರಂತರ. ತೈಲಧಾರೆಯಂತೆ ತುಂಡಾಗದ ಅಚಲ ಭಕ್ತಿ.
ಭಕ್ತಿ ಬೆರೆಸಿದ ಪರಮಾತ್ಮನ ಮಹಾತ್ಮೆ ಜ್ಞಾನ
ಪಕ್ವ ಪರಮಾನ್ನ. ಪಾಯಸ.
ರಾಮ, ಕೃಷ್ಣ, ವಿಠ್ಠಲ ಎಲ್ಲ ಪರಮಾತ್ಮನ ನಾಮಗಳೇ. ಸಾವಿರ ನಾಮ.
ವಿಷ್ಣು ಸಹಸ್ರನಾಮ. ಅನಂತ ನಾಮ. ಅನಂತ ರೂಪಗಳು. ಅನಂತ ಗುಣಗಳು.

**ಇಲ್ಲಿ 'ನೇಹ ನಾನಾಸ್ತಿ ಕಿಂಚನ'**

ಹರಿಯ ರೂಪ ರೂಪಗಳಲ್ಲಿ, ಗುಣ ರೂಪದಲ್ಲಿ ಅಭೇದ. ಅದ್ವೈತ. ದ್ವೈತವಿಲ್ಲ. ಭೇದವಿಲ್ಲ.
ಅದಕ್ಕಾಗಿ ದಾಸರ ಅನೇಕ ನಾಮ ಪ್ರಯೋಗ.
ಒಂದು ಪಾಯಸ ಪ್ರಯೋಜನ.

**ಹರಿವಾಣಕ್ಕೆ ಬಡಿಸಿಕೊಂಡು** ಬಾಯಿ ಚಪ್ಪರಿಸಿರೋ -- ಎಲ್ಲಿಯವರೆಗೆ?
**ಆನಂದ ಆನಂದವೆಂಬೋ ಎರಡು ತೇಗು ಬಂತು ಕಾಣಿರೋ. –**

ಇಷ್ಟು ಪಕ್ವ ಪಾಕವನ್ನು ಹರಿವಾಣಕ್ಕೆ ಬಡಿಸಿಕೊಳ್ಳಿ. ಏನಿದು?
ಹರಿವಾಣ ಒಂದು ವಿಸ್ತಾರ ಪರಾತ.
ಪಾಕ ಅದಕ್ಕೆ ಹಾಕಿ ಕೊಳ್ಳಬೇಕು. ಅಂದರೆ ಜ್ಞಾನ ಭಕ್ತಿಯ ಪರಮಾನ್ನ ಇನ್ನೂ ವಿಸ್ತಾರ ಮಾಡಿ.
ಗುರು ಅನುಗ್ರಹ ಕೂಡಿಸಿಕೊಳ್ಳಿ. ಸಜ್ಜನ ಸಂಗ ಬೆರೆಸಿ. ಶಾಸ್ತ್ರ ಜ್ಞಾನ ಅನುಸಂಧಾನಕ್ಕೆ ತನ್ನಿ.
ಅದನ್ನು ನಿತ್ಯ ಜೀವನದಲ್ಲಿ ಅನುಭವಿಸಿ.
ಮಲಗುವಾಗ, ಏಳುವಾಗ, ಮನೆ ಕೆಲಸ ಮಾಡುವಾಗ, ಸುಖದಲ್ಲಿ, ದುಃಖದಲ್ಲಿ ಕಷ್ಟದಲ್ಲಿ, ಕ್ಲಿಷ್ಟದಲ್ಲಿ
ಬಡತನದಲ್ಲಿ ಸಿರಿತನದಲ್ಲಿ ಸಿರಿ ರಮಣನ ಸ್ಮರಣೆ ಯಾಗಬೇಕು.

**ಬಾಯಿ ಚಪ್ಪರಿಸುವದು**

ಎಂದರೆ ಮತ್ತೆ ಮತ್ತೆ ಹರಿನಾಮ ಸ್ಮರಣೆ. ಜಗಿದಷ್ಟೂ ಸಿಹಿ ಸಿಹಿ. ಕಲ್ಲುಸಕ್ಕರೆ ಪಾಯಸ.
ತೇಗು ತೃಪ್ತಿಯ ಸಂಕೇತ. ಆನಂದದ ತೇಗು ಪರಮಾನಂದದ ಪ್ರತೀಕ.

ಜ್ಞಾನ ಭಕ್ತಿ ಪರಿಪಕ್ವವಾದಾಗ ಸಾಕ್ಷಾತ್ಕಾರ. ಆಗ ಪರಮಾಂದ. ಆಗ
ನೀನು ಈಶ, ನಾನು ದಾಸ
ಎಂಬ ಎರಡು ಆನಂದದ ತೇಗು.

ನೀನು ಪರಮಾತ್ಮ, ನಾನು ಜೀವಾತ್ಮ
ಎಂಬ ಅರಿವಿನ ಆನಂದದ ಎರಡು ತೇಗು.
ಇದೆಲ್ಲ ದೊರೆಯುವದು ಆನಂದಮೂರ್ತಿ ಪುರಂದರ ವಿಠ್ಠಲನ ನಿರಂತರ ಸ್ಮರಣೆಯಿಂದ.
ಇಂಥ ತುಪ್ಪ ಸಕ್ಕರೆ ಹಾಲು ಕೂಡಿದ ಪಾಯಸ ಚಪ್ಪರಿಸಿದವರಾರು?

ರಾಮನಾಮ ಪಾಯಸ ಸದಾ ಚಪ್ಪರಿಸುವ
ಹನುಮಂತನಿದ್ದಾನೆ.
ಶೇಷನಾದ ಲಕ್ಷ್ಮಣನಿದ್ದಾನೆ.

ತನ್ನ ಸತಿ ಉಮೆಗೆ ರಾಮ ನಾಮ ಉಪದೇಶಿಸಿದ ಈಶ್ವರನಿದ್ದಾನೆ. ರಾಮ ನಾಮ ರುಚಿ ಉಂಡ
ವಾಲ್ಮೀಕಿ ಮುನಿಗಳಿದ್ದಾರೆ. ಸಕಲ ಋಷಿ ಮುನಿಗಳು ಈ ಪಾಯಸದ ಬೆನ್ನು ಹತ್ತಿದವರೇ.
ಶಬರಿ ಇದ್ದಾಳೆ. ಜಟಾಯು ಇದ್ದಾನೆ.
ನಾರಾಯಣ ನಾಮದ ಅಜಮಿಳನಿದ್ದಾನೆ.
ಆದಿಮೂಲ ನಾಮದ ರುಚಿಕಂಡ ಗಜ ರಾಜನಿದ್ದಾನೆ.
ನಾರಾಯಣ ಪ್ರಿಯ ಬಾಲ ಧ್ರುವ,
ನರಸಿಂಹ ಪ್ರಿಯ ಬಾಲ ಪ್ರಲ್ಹಾದರಿದ್ದಾರೆ.
ಕೃಷ್ಣ ನಾಮ ಪಾಯಸದ ಭಕುತರ ಮುಗಿಯದ ಸಾಲುಸಾಲೇ ಇದೆ.
ವಿಠ್ಠಲ ನಾಮ ಪಾಯಸದ ರುಚಿಕಂಡ, ಉಂಡ
ಪುರಂದರ ದಾಸರೇ ಸಾಕ್ಷಿಯಾಗಿದ್ದಾರೆ.

ಡಾ. ವಿಜಯೇಂದ್ರ ದೇಸಾಯಿ

**ದಾಸರ, ಮುಖ್ಯ ಪ್ರಾಣರ ಅಂತರ್ಗತ, ಶ್ರೀ ಕೃಷ್ಣಾರ್ಪಣಮಸ್ತು.**